# ಹೊತ್ತು ಕಂತಿದ ಮೇಲೆ



ಬಿ.ಎಂ. ರೋಹಿಣಿ

## ಸಾರಾ ಅಬೂಬಕ್ಕರ್ ನೆನಪು

### ಅಂತರಂಗದ ಸಖಿಯೊಡನೆ ಒಡನಾಡಿದ ಕ್ಷಣಗಳು

‘ಸೂರ್ಯನು ಪಶ್ಚಿಮಕ್ಕೆ ವಾಲಿದ್ದಾನೆ. ಕೆಂಪು ಮಿಶ್ರಿತ ಹಳದಿ ಮೋಡಗಳು ಅಲ್ಲೊಂದು ಇಲ್ಲೊಂದು ತೇಲಾಡಲಾರಂಭಿಸಿವೆ. ಸೂರ್ಯಾಸ್ತವು ತೀರಾ ಸಮೀಪದಲ್ಲಿಲ್ಲದಿದ್ದರೂ ಬಹಳ ದೂರದಲ್ಲೂ ಇರಲಾರದು. ಆದರೂ ಉದಯಕ್ಕೊಂದು ಅಸ್ತಮಾನ ಇದ್ದೇ ಇದೆಯಲ್ಲ’– ಇದು ‘ಹೊತ್ತು ಕಂತುವ ಮುನ್ನ’ ಆತ್ಮಕತೆಯಲ್ಲಿ ಸಾರಾ ಅವರು ಬರೆದ ಮಾತು. ಹೊತ್ತು ಕಂತಿದ ಬಳಿಕದ ಈ ಹೊತ್ತಿನಲ್ಲಿ ನನ್ನ ಮನಸ್ಸು ಖಾಲಿಖಾಲಿ ಅನಿಸುತ್ತಿದೆ. ಮಂಗಳೂರಿನ ಕಾರ್‌ಸ್ಟ್ರೀಟ್‌ನಲ್ಲಿರುವ ದಯಾನಂದ ಪೈ ಪದವಿ ಕಾಲೇಜಿನಲ್ಲಿ ಮೂರು ವರ್ಷಗಳ ಹಿಂದೆ ದತ್ತಿನಿಧಿ ಕಾರ್ಯಕ್ರಮಕ್ಕೆ ಬಂದು ಕರಾವಳಿ ಲೇಖಕಿಯರ ಸಂಘದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೇ ಅವರು ಸಾಮಾಜಿಕ ವೇದಿಕೆಯಲ್ಲಿ ಕಾಣಿಸಿಕೊಂಡಿದ್ದು ಕೊನೆಯಾಯಿತು. ಅವರ ಓಡಾಟ ನಿಂತ ಬಳಿಕ ನಾವು ಗೆಳತಿಯರು ಅವರ ಮನೆಗೆ ಹೋಗಿ ಆಗಾಗ ಮಾತನಾಡಿಸಿ ಬರುತ್ತಿದ್ದೆವು. ಆಗ ಅವರ ಚೈತನ್ಯ ಪುಟಿದೇಳುತ್ತಿತ್ತು. ಅವರು ನಮ್ಮನ್ನು ಕಂಡು ಸಂಭ್ರಮಿಸುವ ಪರಿಗೆ ಬೆರಗಾಗುತ್ತಿದ್ದೆವು. ಇತ್ತೀಚಿನ ಕೆಲವು ತಿಂಗಳುಗಳಲ್ಲಿ ನೆನಪು ಕೈಕೊಟ್ಟಾಗಲೂ ಮತ್ತೆ ಮತ್ತೆ ನಮ್ಮ ಕೈ ಹಿಡಿದು ಮಾತನಾಡಿದ ರೀತಿಯು ನಮ್ಮ ಕಣ್ಣುಗಳನ್ನು ತೇವಗೊಳಿಸಿತ್ತು. ಸಾರಾ ನಮ್ಮನ್ನು ಅಗಲಿದ ಈ ಕ್ಷಣದಲ್ಲಿ ಅವರ ಸಾಧನಾ ಪಥದತ್ತ ಹಿಂತಿರುಗಿ ನೋಡಿದಾಗ ವಿಸ್ಮಯ ಪಡದಿರಲು ಸಾಧ್ಯವಿಲ್ಲ.

ಕಾಸರಗೋಡಿನ ಕುಲೀನ ಮನೆತನ ಪುದಿಯಪುರದ ಅಹಮದ್–ಜೈನಾಬಿ ದಂಪತಿ, ಹೆಣ್ಣು ಮಗುವಿಗಾಗಿ ಬಯಸಿ, ಹರಕೆ ಹೇಳಿ ಜನಿಸಿದ ಏಕೈಕ ಪುತ್ರಿ ಸಾರಾ. ಐದು ಮಂದಿ ಸೋದರರ ಮುದ್ದಿನ ಸೋದರಿ. ಹೆಣ್ಣು ಮಕ್ಕಳು ಶಾಲೆಗೆ ಹೋಗುವುದಕ್ಕೆ ನಿರ್ಬಂಧವಿದ್ದ ಕಾಲದಲ್ಲಿ ಎಸ್‌ಎಸ್‌ಎಲ್‌ಸಿವರೆಗೆ ಅವರನ್ನು ಓದಿಸಿದ್ದು ಮುಂದೆ ಆ ಸಮುದಾಯದ ಹೆಣ್ಣುಮಕ್ಕಳಿಗೆ ಮಾದರಿಯಾಯಿತು. ಹೆಸರಾಂತ ವಕೀಲರಾಗಿದ್ದ ಅವರ ಅಪ್ಪ, ತಮ್ಮ ಮಗಳಿಗೆ, ‘ಅನ್ಯಾಯವನ್ನು ಸಹಿಸಬೇಡ, ಪ್ರಶ್ನಿಸು, ಪ್ರತಿಭಟಿಸು’ ಎಂದು ಕಿವಿಮಾತು ಹೇಳಿದ್ದನ್ನು ಸಾರಾ ಆಗಾಗ ಸ್ಮರಿಸಿಕೊಳ್ಳುತ್ತಿದ್ದರು. ಯಾಕೆಂದರೆ ತಮ್ಮ ಜೀವಮಾನವಿಡೀ ಸಾಹಿತ್ಯದ ಮೂಲಕ ಮತ್ತು ಸಂಘಟನೆಯ ಮೂಲಕ ಅವರು ಮಾಡಿದ್ದು ಇದೇ ಕೆಲಸವನ್ನು.

ನಾನು ಒಂಟಿಯಾಗಿರುವುದು ಅವರಿಗೆ ಒಂದು